## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 2346/2025**

**ಸಿ.ಡಬ್ಲ್ಯೂಃ 02, ಪಿ.ಡಬ್ಲ್ಯೂಃ 02**

| | | |
|---|---|---|
| ಸಾಕ್ಷಿದಾರರ ಹೆಸರು | : | ಗುರುದೀಪ ಹೊನ್ನಪ್ಪ ನಾಯ್ಕ |
| ತಂದೆಯ ಹೆಸರು | : | ಹೊನ್ನಪ್ಪ ನಾಯ್ಕ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ರಿಯಲ್ ಎಸ್ಟೇಟ್ |
| ವಾಸ್ತವ್ಯ | : | ನೀರಗದ್ದೆ , ಮುಂಡಳ್ಳಿ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 03/08/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿ.23.04.2025 ರಂದು ಮಣ್ಕುಳಿ ಕ್ರಾಸ್ ಬಳಿ ಅಪಘಾತವಾಗಿದ್ದು ಸದ್ರಿ ಕಾರಿನ ಸಂಖ್ಯೆ ಕೆ.ಎಲ್.60.ಯು.9501 ಹಾಗೂ ಹೊಂಡಾ ಆಕ್ಟಿವಾ ಸ್ಕೂಟಿ ನಂಬರ್ ಕೆಎ.47.ಆರ್.8174 ಆಗಿರುತ್ತದೆ. ನನಗೆ ಮತ್ತು ಚಾಸಾ 3 ರವರಿಗೆ ಪೊಲೀಸರು ಪಂಚನಾಮೆಗೆ ಕರೆದಿದ್ದರು. ಅಪಘಾತವಾದ ಸ್ಥಳವನ್ನು ಪೊಲೀಸರು ತೋರಿಸಿರುತ್ತಾರೆ. ಪೊಲೀಸರು ಬೆಳಿಗ್ಗೆ 10.30ಯಿಂದ 11.00 ಗಂಟೆ ತನಕ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ದಿ.23.04.2025 ರಯಿ ಪೊಲೀಸ್ ಠಾಣೆಗೆ ಪೊಲೀಸರು ವಾಹನಗಳು ಪಂಚನಾಮೆಗೆ ಕರೆಯಿಸಿದ್ದರು ಮತ್ತೆ ಯಾರಿದ್ದರು ಎಂದು ನನಗೆ ನೆನಪಿರುವುದಿಲ್ಲ. ಬೆಳಿಗ್ಗೆ 10.45 ಗಂಟೆಯಿಂದ 11.45 ರವರೆ ಪೊಲೀಸ್ ಠಾಣೆಯಲ್ಲಿ ವಾಹನ ಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತದಲ್ಲಿ ಕಾರಿಗೆ ಎಡಬದಿಯ ಕನ್ನಡಿ ಮತ್ತು ಮುಂದುಗಡೆ ಜಖಂ ಆಗಿರುತ್ತದೆ. ದ್ವಿಚಕ್ರ ವಾಹನದ ಮಡಗಾಡ್ ಮತ್ತು ಬಂಪರ್ ಡ್ಯಾಮೇಜ್ ಆಗಿತ್ತು. ಸದ್ರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ.2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ.5 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.6 ಮತ್ತು 7 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಅಪಘಾತಕ್ಕೆ ಒಳಪಟ್ಟ ಕಾರಿನ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.8 ಮತ್ತು ನಿಪಿ.9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್. ಎಸ್. ಎಂ ವಕೀಲರಿಂದ,**

2. ನನಗೆ ಮಲಯಾಳಂ ಭಾಷೆ ಬರುವುದಿಲ್ಲ. ದೂರುದಾರರು ಕೇರಳದವರಾಗಿದ್ದಾರೆ. ನಮ್ಮ ಮನೆಯು ಅಪಘಾತದ ಸ್ಥಳದಿಂದ 7 ಕಿ.ಮಿ. ದೂರದಲ್ಲಿ ಇದೆ. ಅಪಘಾತವಾದ ಸ್ಥಳದ ಸುತ್ತಮುತ್ತಲು

ಮನೆ ಹಾಗೂ ಹೋಟೆಲ್ ಗಳು ಇದೆ. ಪಂಚನಾಮೆಗೆ ಬರಲು ನನಗೆ ಪೊಲೀಸರು ನೋಟಿಸನ್ನು ನೀಡಿದ್ದು ಇಲ್ಲ. ಪಂಚನಾಮೆ ಬರೆಯುವ ಕಾಲಕ್ಕೆ ನಾನು ಸ್ಥಳದಲ್ಲಿ ಇರಲಿಲ್ಲ. ಅಪಘಾತದಲ್ಲಿ ಪೆಟ್ಟಾದವರು ಎಲ್ಲಿಯವರು ನನಗೆ ಗೊತ್ತಿಲ್ಲ. ಅಪಘಾತದ ಸ್ಥಳದ ಚತುರ್ಗಡಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಬರೆಯಲು ಯಾರು ಮಾಹಿಡಿ ನೀಡಿದ್ದಾರೆ ನನಗೆ ಗೊತ್ತಿಲ್ಲ. ಪೊಲೀಸರು ಕರೆದಿದಕ್ಕೆ ನಾನು ಹೋಗಿ ಪೋಟೋದಲ್ಲಿ ನಿಂತು ಸ್ಥಳವನ್ನು ತೋರಿಸಿದ್ದೇನೆ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

sd/-

**ಪ್ರ.ದ.ನ್ಯಾ.ದಂ., ಭಟ್ಕಳ.**